**OS.No**.72/2021 **PW**-1

**ದಿನಾಂಕಃ 17.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು 2 ರಿಂದ 5ನೇ ಪ್ರತಿವಾದಿಗಳ ಪರ ಶ್ರೀ. ಜೆ ಯು ಆರ್ . ವಕೀಲರಿಂದಃ**

ನಾನು ಲೋಕೇಶ್ ಅವರನ್ನು ಮದುವೆಯಾಗಿ 5 ವರ್ಷ ಆಗಿದೆ. ಈಗ ನಾನು ಹೊಳೆನರಸೀಪುರದಲ್ಲಿ ಹೆಚ್ ಆರ್ ಪಿ ಕ್ವಾಟ್ರಸ್ ಅಲ್ಲಿ ವಾಸವಾಗಿದ್ದೇವೆ. ನನ್ನ ಗಂಡ ಬಿ ಎಂ ಟಿ ಸಿ ಅಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದಾರೆ. 2 ನೇ ವಾದಿ ಐಚನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. 1 ನೇ ಪ್ರತಿವಾದಿ ಐಚನಹಳ್ಳಿ ಗ್ರಾಮದಲ್ಲಿ 2 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದಾರೆ. 2 ನೇ ವಾದಿ ಹೊಳೆನರಸೀಪುರದಲ್ಲಿ ವಾಸವಾಗಿದ್ದಾರೆ . ನಾನೇ ದಾವೆಗೆ ಮಾಹಿತಿ ಕೊಟ್ಟಿರುತ್ತೇನೆ. ನನ್ನ ತಾತ ರಂಗಯ್ಯ ನಾವು ಚಿಕ್ಕವರಿದ್ದಾಗ ಸುಮಾರು 30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ರಂಗಯ್ಯ ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಲಯಕ್ಕೆ ಹಾಜರು ಪಡಿಸಿಲ್ಲ. ಚನ್ನಮ್ಮ ಸುಮಾರು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ, ಅವರ ಮರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ವಂಶವೃಕ್ಷಕ್ಕೆ ಸಂಬಂಧ ಪಟ್ಟಂತೆ ತಾಲ್ಲೂಕು ಕಛೇರಿಯಿಂದ ಪ್ರಮಾಣ ಪತ್ರವನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಎಷ್ಟು ಸರ್ವೆ ನಂಬರ್ ಗಳ ಮೇಲೆ ದಾವೆ ಸಲ್ಲಿಸಿದ್ದೇನೆ, ಅವುಗಳನ್ನು ಸರ್ವೆ ನಂಬರ್, ಕ್ಷೇತ್ರ ಹಾಗೂ ಚೆಕ್ಕುಬಂದಿ ಈಗ ನನಗೆ ಹೇಳಲು ಬರುವುದಿಲ್ಲ.

ಐಚನಹಳ್ಳಿ ಗ್ರಾಮದಲ್ಲಿ 2 ನೇ ವಾದಿ ಮತ್ತು 1 ನೇ ಪ್ರತಿವಾದಿ ಒಟ್ಟು ಎಷ್ಟು ಗುಂಟೆ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚಾಯಿತಿಗೆ ನಾನು ಹೋಗಿಲ್ಲ. ಕಣ್ಣಳತೆ ಆಧಾರದ ಮೇಲೆ ನಾವು ಸ್ವಲ್ಪ ಜಮೀನನ್ನು ನಮ್ಮ ತಂದೆಯ ಕಾಲದಿಂದ ಸ್ವಾಧೀನದಲ್ಲಿದ್ದೇವೆ ಎಂದು ದಾವೆಯಲ್ಲಿ ಹೇಳಿದ್ದೇವೆ ಎಂದರೆ ಹೌದು. ದಾವಾ

ಶ್ಯೆಡೂಲ್ ಕ್ರಮ ಸಂಖ್ಯೆ 1 ರಿಂದ 3 ಆಸ್ತಿಗಳು ನನ್ನ ತಾತ ರಂಗಯ್ಯನಿಗೆ ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ಕ್ರಮ ಸಂಖ್ಯೆ 1ರಿಂದ 3 ರ ಪಹಣಿಗಳು ಯಾರ ಹೆಸರಿನಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ. ಕ್ರಮ ಸಂಖ್ಯೆ 4 ರ ಆಸ್ತಿಯಲ್ಲಿ ಸ್ವಲ್ಪ ವಿಸ್ತೀರ್ಣ ರಸ್ತೆಗೆ ಭೂ ಸ್ವಾಧೀನವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕ್ರಮ ಸಂಖ್ಯೆ 5 ರ ಪೈಕಿ 13 ಗುಂಟೆ ಆಸ್ತಿ ನನ್ನ ತಾಯಿ 1 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಹೌದು. ಕ್ರಮ ಸಂಖ್ಯೆ 6 ಮತ್ತು 7 ಆಸ್ತಿಯ ಪಹಣಿಗಳು ನನ್ನ ತಂದೆಯ ಹೆಸರಿನಲ್ಲಿ ಇವೆ ಎಂದರೆ ಹೌದು. ಕ್ರಮ ಸಂಖ್ಯೆ 8 ರ ಆಸ್ತಿಯ ಪಹಣಿ 2 ನೇ ಪ್ರತಿವಾದಿ ಹೆಂಡತಿ ಪುಟ್ಟಮ್ಮ ಅವರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ಕ್ರಮ ಸಂಖ್ಯೆ 8 ರ ಆಸ್ತಿ ಪುಟ್ಟಮ್ಮ ರವರಿಗೆ ಸರ್ಕಾರ್ ಮುಖಾಂತರ ಬಂದಿದ್ದು , ಸದರಿ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ ಎಂದರೆ ಗೊತ್ತಿಲ್ಲ. ಕ್ರಮ ಸಂಖ್ಯೆ 1 ರಿಂದ 3 ರ ಆಸ್ತಿಗಳು ನನ್ನ ತಾತ ರಂಗಯ್ಯ ಅವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಗೊತ್ತಿಲ್ಲ. ಕ್ರಮ ಸಂಖ್ಯೆ 1 ರಿಂದ 3 ಆಸ್ತಿಗಳು ನನ್ನ ತಾತ ರಂಗಯ್ಯನ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ತಮ್ಮ ಜೀವಿತ ಕಾಲದಲ್ಲಿ 4 ಮತ್ತು 5 ಪ್ರತಿವಾದಿಯ ಹೆಸರಿಗೆ ಮರಣ ಶಾಸನವನ್ನು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. ಕ್ರಮ ಸಂಖ್ಯೆ 5 ರಲ್ಲಿ ನನ್ನ ತಂದೆ ಮತ್ತು 2 ನೇ ಪ್ರತಿವಾದಿಗೂ ತಲಾ 13 ಗುಂಟೆ ಆಸ್ತಿ ವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ನನಗೆ ಈ ದಾವೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಅಲ್ಲದೇ ಪಹಣಿಗಳಲ್ಲಿ ದಾಖಲಾದ ಹೆಸರುಗಳಿಗೆ ಸಂಬಂಧ ಪಟ್ಟಂತೆ ಮ್ಯುಟೇಶನ್ ಎಂಟ್ರಿಗಳ ಸಂಬಂಧ ಪಟ್ಟ ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಜೀವಿತ ಕಾಲದಲ್ಲಿಯೇ 2 ನೇ ಪ್ರತಿವಾದಿ ಮತ್ತು ನನ್ನ ತಂದೆಯ ಮಧ್ಯೆ ಪಾಲು ವಿಭಾಗ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಎಲ್ಲಾ ವಿಷಯ ಗೊತ್ತಿದ್ದೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಶ್ಯೆಡೂಲ್ ಅಲ್ಲಿ ನಮೂದಿಸಿರುವ

ಚೆಕ್ಕುಬಂದಿಗಳ ಮಾಹಿತಿಗಳನ್ನು ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿ ನಮ್ಮ ತಂದೆ ನನಗೆ ಹೇಳಿಕೊಟ್ಟಿದ್ದರು ಅದನ್ನೇ ನಾನು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

2 ನೇ ಪ್ರತಿವಾದಿ ಅವರ ಪರ ವಕೀಲರನ್ನು ಕೂಗಿ ಕರೆಸಲಾಯಿತು, ಅವರ ಗೈರು ಹಾಜರಿಯ ಮೇರೆಗೆ 2 ನೇ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.